ಇನ್ನೊಂದು ರೈಲಿನಲ್ಲಿ ಇಲ್ಲಿಗೆ ಬಂದೆ.''

'ಹೋದೆಯಾ ಪಿಶಾಚಿ ಎಂದರೆ ಬಂದೆ ಗವಾಕ್ಷೀಲಿ' ಎನ್ನುವ ಗಾದೆಮಾತು ನನಗೆ ನೆನಪಾಯಿತು. ಆತನ ಕಡೆಗೆ ನಗುವನ್ನು ಬೀರಿ ಸುಮ್ಮನಾದೆ. ಅದೇ ಸಮಯದಲ್ಲಿ ಒಂದು ರೈಲು ಹೊರಡುವುದಕ್ಕೆ ಸಿದ್ಧವಾಗಿತ್ತು; 'ಚುಕುಬುಕು' ಆರಂಭವಾಗಿತ್ತು. ಕೂಡಲೇ ನನ್ನ ಚೀಲವನ್ನು ಹೆಗಲಿಗೇರಿಸಿಕೊಂಡು ಓಡುತ್ತ ಹೋಗಿ ಅದನ್ನು ಏರಿದೆ. ಚಲಿಸುವ ಗಾಡಿಯನ್ನು ಏರುವುದರಲ್ಲಿ ನನ್ನ 'ಮಿತ್ರ' ನನಗಿಂತಲೂ ಚತುರ. ಆತನೂ ರೈಲು ಹತ್ತಿಕೊಂಡು ನನಗೆ ಹೇಳಿದ, "ಆದರೆ... ಈ ರೈಲು ಪಾಟ್ನಾಕ್ಕೆ ಹೋಗುವುದಿಲ್ಲ; ರಾಂಚಿಗೆ ಹೋಗುತ್ತದೆ! ನೀವು ಎಲ್ಲಿಂದ ಬಂದಿರೋ ಅಲ್ಲಿಗೇ ಹೋಗುತ್ತದೆ!''

ನಾನು ಗಂಭೀರ ಸ್ವರದಲ್ಲಿ ನುಡಿದೆ, "ಹ್ಞಾ... ನಾನು ಅಲ್ಲಿಗೇ ಹೋಗುತ್ತೇನೆ.''

"ಏನು! ಪಾಟ್ನಾಗೆ ಹೋಗುವುದಿಲ್ಲವೇ? ಅಲ್ಲಿಗೆ ಹೊರಟವರಲ್ಲವೇ ನೀವು? ಹ್ಞಾ... ಅರ್ಥವಾಯಿತು. ಕವಿಗಳ `ಮೂಡ್' ಹೇಗಿರುತ್ತದೆ ಎನ್ನುವುದನ್ನು ಊಹಿಸುವುದು ಯಾರಿಂದ ಸಾಧ್ಯ! ಯಾವಾಗ ಎಲ್ಲಿಗೆ ಹೋಗಬೇಕನ್ನಿಸುತ್ತದೆಯೋ ಅಲ್ಲಿಗೆ ಹೊರಟುಬಿಡೋದೇ!''

ನಾನು ಹೇಳಿದೆ, "ಹೌದು... ಆದರೆ... ನಾನು ಕವಿಯಾದರೆ ನೀವು ಮಹಾಕವಿ ಎನ್ನಿಸುತ್ತಿದೆ...''

ನಾನು 'ಮಹಾಕವಿ' ಶಬ್ದವನ್ನು ಬಳಸುತ್ತಿದ್ದಂತೆಯೇ ಆತನ ಮುಖದ ಚಹರೆಯೇ ಬದಲಾಗಿಹೋಯಿತು. ಆತ ಸಂಭ್ರಮದಿAದ ನುಡಿದ, ``ಇಷ್ಟೊಂದು ಸುದೀರ್ಘ ಕಾಲ ಜೊತೆಯಲ್ಲಿ ಪ್ರಯಾಣಿಸಿದ ನಂತರ, ಅಂತೂ ಇಂತೂ ನೀವು ನನ್ನನ್ನು ಸರಿಯಾಗಿ ಗುರುತಿಸಿದಿರಿ. ಹ್ಞಾ... ಹ್ಞಾ... ಒಂದು ವೇಳೆ ಮಹಾಕಾವ್ಯವನ್ನು ಬರೆಯುವವರಿಗೆ 'ಮಹಾಕವಿ' ಎಂದು ಸಂಬೋಧಿಸುವುದಾದರೆ, ಅದು ನನಗೆ ಸಂಪೂರ್ಣವಾಗಿ ಅನ್ವಯಿಸುತ್ತದೆ. ಏಕೆಂದರೆ ನಾನೊಂದು ಮಹಾಕಾವ್ಯವನ್ನು ಬರೆದು ಮುಗಿಸಿದ್ದೇನೆ.''

ಆತನ ಮಾತುಗಳನ್ನು ಕೇಳಿ ನಾನು ಅವಾಕ್ಕಾದೆ. ಆಶ್ಚರ್ಯದಿಂದ ಆತನ ಮುಖವನ್ನು ಮತ್ತೊಮ್ಮೆ ನೋಡಿದಾಗ ಆತ ದುಃಖ ಹಾಗೂ ವಿಷಾದವನ್ನು ವ್ಯಕ್ತಪಡಿಸುತ್ತ ಹೇಳಿದ, "ನಾನು ಬೆಳಿಗ್ಗೆಯಿಂದಲೂ ನಿಮ್ಮನ್ನು ಪ್ರಶಂಸಿಸುತ್ತಲೇ ಇದ್ದೇನೆ. ಎಲ್ಲ ಅಪರಿಚಿತರಿಗೂ ನಿಮ್ಮ ಪರಿಚಯ ಮಾಡಿಸುತ್ತಲೇ ಇದ್ದೆ. ಆದರೆ ಈ ಅವಧಿಯಲ್ಲಿ ನೀವು ಒಂದೇ ಒಂದು ಬಾರಿಯೂ ಕೂಡ ನನ್ನ ಪರಿಚಯವಿರಲಿ, ಹೆಸರನ್ನೂ ಕೂಡ ಕೇಳಲಿಲ್ಲವಲ್ಲ!''

ನನ್ನ ವರ್ತನೆ ನನಗೇ ಬೇಸರ ಮೂಡಿಸಿತು. ಅದೇ ಸಮಯದಲ್ಲಿ ಆತ ತನ್ನ ಚೀಲದಿಂದ ದಪ್ಪನೆಯ ಹಸ್ತಪ್ರತಿಯನ್ನು ಹೊರಕ್ಕೆ ತೆಗೆದು, ನನಗೆ ತೋರಿಸುತ್ತ ಹೇಳಿದ, "ಇದುವೇ ನನ್ನ ಮಹಾಕಾವ್ಯ. ಇದನ್ನು ನಾನು ಅಮರ್ ಸಿಂಗ್ ಅವರಿಗೆ ಅರ್ಪಣೆ ಮಾಡಬೇಕು ಎಂದುಕೊAಡಿದ್ದೆ. ಆದರೆ ಅವರು ಕವಿಯಲ್ಲ; ಕಾದಂಬರಿಕಾರರು. ಈಗ ನಿಮ್ಮ ಪರಿಚಯವಾಗಿದೆ. ಹಾಗಾಗಿ ಇದನ್ನು ನಿಮಗೇ ಅರ್ಪಿಸುತ್ತೇನೆ... ಅತ್ಯಂತ ಪ್ರೀತಿಯಿಂದ.''

'ಮಿತ್ರ'ನ ಮಹಾಕಾವ್ಯದ ಹಸ್ತಪ್ರತಿಯನ್ನು ಕೈಗೆತ್ತಿಕೊಂಡು ಪುಟಗಳನ್ನು ತಿರುವಿಹಾಕತೊಡಗಿದೆ. ಲಯಬದ್ಧವಾಗಿ, ಪ್ರಾಸಬದ್ಧವಾಗಿ, ಛಂದೋಬದ್ಧವಾಗಿ ಅದು ರಚಿಸಲ್ಪಟ್ಟಿರುವಂತೆ ಮೇಲ್ನೋಟಕ್ಕೇ ಕಂಡುಬಂದಿತು. ಆತನ ಬಗ್ಗೆ ನನ್ನೊಳಗೆ ಮೆಚ್ಚುಗೆ ಭಾವನೆ ಮೂಡಿತು. ಮುಂದಿನ ನಿಲ್ದಾಣವನ್ನು ತಲುಪುವಷ್ಟರಲ್ಲಿ ಕಂಪಾರ್ಟ್ಮೆಂಟ್‌ನಲ್ಲಿ 'ಕವಿಗೋಷ್ಠಿ'ಯೇ ನಡೆದುಹೋಯಿತು!

ನಾನು ಹೇಳುತ್ತಿದ್ದುದನ್ನು ಮಿತ್ರ ಆಸಕ್ತಿಯಿಂದ ಕೇಳಿಸಿಕೊಳ್ಳುತ್ತಿದ್ದ; ಆತನ ಮಾತುಗಳನ್ನು, ಕವಿತೆಗಳನ್ನು ನಾನು ಶ್ರದ್ಧೆಯಿಂದ ಕೇಳಿಸಿಕೊಳ್ಳುತ್ತಿದ್ದೆ. ನನ್ನ ಮಿತ್ರ ಬೆಳಿಗ್ಗೆ ಯಾವ ನಿಲ್ದಾಣದಲ್ಲಿ ರೈಲು ಏರಿದ್ದನೋ ಅದೇ ನಿಲ್ದಾಣದಲ್ಲಿಯೇ ಇಳಿದುಹೋದ. ಮತ್ತೆ ಭೇಟಿಯಾಗುವುದಕ್ಕೆ ಯೋಜನೆಯನ್ನೂ ನಾವು ರೂಪಿಸಿಕೊಂಡಿದ್ದೆವು.

ನಾನೂ ಅಷ್ಟೇ... ಬೆಳಿಗ್ಗೆ ಎಲ್ಲಿಂದ ಪ್ರಯಾಣವನ್ನು ಆರಂಭಿಸಿದ್ದೆನೋ ಅಲ್ಲಿಗೇ ಬಂದು ತಲುಪಿದ್ದೆ. ಇಂದಿನ ಸುದೀರ್ಘ ಪ್ರಯಾಣದಿಂದ ನನ್ನ ಕೆಲಸವೇನೂ ಆಗಿರಲಿಲ್ಲ; ನನಗೆ ಗೌರವ-ಸನ್ಮಾನಗಳೂ ನಡೆದಿರಲಿಲ್ಲ; ಧನಲಾಭವೂ ಆಗಿರಲಿಲ್ಲ. ಆದರೆ ಯಾವುದೇ 'ಲಾಭ'ವೂ ಆಗಿಲ್ಲ ಎಂದು ಹೇಗೆ ಹೇಳಲಿ?

●